ಸಮಿತಿಯವರು ತೀರ್ಮಾನ ಮಾಡಿದ್ದರು. ಅದರಂತೆಯೇ ಈಗಲೂ ನಡೆದುಕೊಂಡು ಬರುತ್ತಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಹೊಸದುರ್ಗ ಜಿಲ್ಲೆಯಲ್ಲಿ R.C.F. ಜಿಲ್ಲಾಬೋರ್ಡು ರಸ್ತೆ, 4ನೆಯ ದರ್ಜೆಯ ರಸ್ತೆ ಎಂಬುದಾಗಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

ಶ್ರೀ ವೈ. ಹುಚ್ಚಮಾಸ್ತಿಗೌಡ.—ಈ ಹಿಂದೆ ಸರ್ಕಾರದವರು ಒಂದು ಸಾರಿ ಕೆಲವು ಜಿಲ್ಲಾ ಬೋರ್ಡುಗಳ ಅಧ್ಯಕ್ಷರ ಸಮಿತಿಯೊಂದನ್ನು ರಚಿಸಿ ಆ ಸಮಿತಿಯವರು ಒಪ್ಪಿಸಿದ ನಲಹೆಯ ಪ್ರಕಾರವೆ ಈ ರಸ್ತೆಗಳನ್ನು ಈ ರೀತಿ ಮಾಡಬೇಕೆಂಬ ತೀರ್ಮಾನಕ್ಕೆ ಬಂದರಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು. 1949 ರಲ್ಲಿ ಆ ರೀತಿ ಮಾಡಿದರು.

Bridge across the Arkavathi near Bekuppe, Kanakapura Taluk.

Q.—31. Sri S. KARIAPPA (Virupakshipura).—

Will the Government be pleased to state :—

(*a*) the date of sanction of the bridge across the Arkavathi near Bekuppe, Kanakapura taluk ;

(*b*) the total estimated cost of the same ;

(*c*) the reasons for delay in taking up its construction ?

A.—Sri H. K. VEERANNA GOWDH (Minister for Public Works).—

(*a*) 3rd July 1956.

(*b*) 3,31,000.

(*c*) Investigations had to be made as to the type of foundation to be adopted and hence it has not yet been possible to commence work.

ಶ್ರೀ ಎಸ್. ಕರಿಯಪ್ಪ.—ಈ ಸೇತುವೆಗೆ ಸಂಬಂಧವಾದ ಪರಿಶೀಲನೆ ಕಾರ್ಯಗಳೆಲ್ಲ ಈಗ ಮುಗಿದಿವೆಯೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಮುಗಿದಿಲ್ಲ; ಇನ್ನೂ ನಡೆಯುತ್ತಿದೆ.

ಶ್ರೀ ಎಸ್. ಕರಿಯಪ್ಪ.—ಮುಗಿಯುವುದಕ್ಕೆ ಇನ್ನೂ ಎಷ್ಟು ದಿವಸಗಳು ಬೇಕಾಗಬಹುದು?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾನೆ ಬೋರುಪೆಲ್ ಹಾಕುತ್ತಿದ್ದಾರೆ—ಎಷ್ಟು ಆಳದ ತನಕ ತಳಪಾಯ ಹಾಕಬೇಕೆಂಬುದು ತೀರ್ಮಾನವಾದ ಕೂಡಲೆ ಮುಂದಿನ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಆದರೆ ಅಷ್ಟೇನೂ ನಿಧಾನವಾಗಲಾರದು.

ಶ್ರೀ ಎಸ್. ಕರಿಯಪ್ಪ.—ಆದರೆ ಸರ್ಕಾರದವರು ಈಗಾಗಲೇ ಒಂದಾವರ್ತಿ ಟೆಂಡರುಗಳನ್ನು ಕರೆದಿದ್ದಾರೆ. ಆದರೆ ಕೆಲಸದ ಸಂಪೂರ್ಣ ಮಾಹಿತಿ ಗೊತ್ತಿಲ್ಲದಿರುವುದರಿಂದ ಪುನಃ ಟೆಂಡರುಗಳನ್ನು ಕರೆಯುವರೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾರು ಟೆಂಡರ್ ಕರೆದಿದ್ದಾರೋ ಏನೋ ಆ ವಿಚಾರವೇ ನನಗೆ ಗೊತ್ತಿಲ್ಲ. It is being investigated.

Construction of Bridges at Dennur, Sathehal and Tamba.

Q.—94. SRI SHANKAR GOUDA, Y. PATIL (Sindigi).—

Will the Government be pleased to state :—

(*a*) whether they are aware of the commercial importance of the Sholapur Bellary Road ;

(*b*) whether it has come to their notice that great inconvenience is caused to the traffic due to lack of bridges at Dennur on Krishna river, Hungund Taluq and at Sathehal, Bagevadi on Don river and at Tamba on the Nala, Indi Taluk ;

(*c*) whether they would take immediate steps for the construction of bridges at the above said places in order to avoid 60 miles round about journey for the vehicles and public ?

A.— Sri H. K. VEERANNA GOWDH (Minister for Public Works).—

(*a*) There is no direct road known as "Sholapur-Bellary" Road. There is however a road connecting these two places *via* Bijapur, Bagalkot and Hungund. This is important commercially.

(*b*) Yes.

(*c*) A proposal to construct Irish bridges has been made and will be considered subject to availability of funds.

ಶ್ರೀ ಶಂಕರಗೌಡ ವೈ. ಪಾಟೀಲ್.—ನನ್ನ ಪ್ರಶ್ನೆಯ (ಎ) ವಿಭಾಗಕ್ಕೆ ಉತ್ತರವಾಗಿ ಸೊಲ್ಲಾಪುರ ಬಳ್ಳಾರಿ ಎಂಬ ಹೆಸರುಳ್ಳ ನೇರವಾದ ರಸ್ತೆಯೇ ಇಲ್ಲವೆಂದು ತಿಳಿಸಲಾಗಿದೆ. ಆದರೆ ಹುನಗುಂದದ ತಾಲ್ಲೂಕಿನಲ್ಲಿ ಕೃಷ್ಣಾ ನದಿಯ ದಂಡೆಯಲ್ಲಿರುವ ಧನ್ನೂರು ಬಾಗೇವಾಡಿ ತಾಲ್ಲೂಕಿನಲ್ಲಿ ಡೋಣಿ ನದಿ ದಂಡೆಯಲ್ಲಿರುವ ಸಾಥಿ ಹಾಳ ಮತ್ತು ಇಂಡಿ ತಾಲ್ಲೂಕಿನಲ್ಲಿ ಹಳ್ಳದ ದಂಡೆಯ ಮೇಲಿರುವ ತಾಂಬೆ ಎಂಬ ಈ ಗ್ರಾಮಗಳ ಮೂಲಕ ಹೋಗತಕ್ಕ ರಸ್ತೆಯನ್ನು ಸರ್ಕಾರದವರು ಏನೆಂದುಕರೆಯುತ್ತಾರೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಆದರೆ ಆ ಸ್ಥಳದಲ್ಲಿ ಬಿಜಾಪುರ ಬಾಗಲು ಕೋಟೆ ಮತ್ತು ಹುನಗುಂದಗಳ ಕಡೆಗೆ ಹೋಗತಕ್ಕ ಒಂದು ರಸ್ತೆಯಿದೆ. ಅದನ್ನೇ

(ಶ್ರೀ ಎಚ್. ಕೆ. ವೀರಣ್ಣಗೌಡ).

ಮಾನ್ಯ ಸದಸ್ಯರು "ಸೊರಬ್ಲಾಪುರ-ಬಳ್ಳಾರಿ ರಸ್ತೆ" ಎಂದು ಹೇಳಿದ್ದಾರೋ ಏನೋ, ಅದು ನನಗೆ ತಿಳಿಯದು.

ಶ್ರೀ ಶಂಕರಗೌಡ ಪೈ. ಪಾಟೀಲ್.—ತಾಂಬೆ ಮೇಲೆ ಮುದ್ದೇ ಬಿಹಾಳ್ ಬಾಗೇವಾಡಿ ಇತ್ಯಾದಿ ಮಾರ್ಗ ವಾಗಿ ಹೋಗತಕ್ಕ ರಸ್ತೆಗೆ "ಬಳ್ಳಾರಿ-ಸೊರಬ್ಲಾಪುರ" ರಸ್ತೆ ಎಂದು ಹೇಳಿದೆ ಮತ್ತೇನೆಂದು ಹೇಳುತ್ತಾರೆ?

ಅಧ್ಯಕ್ಷರು.—ತಾವು ಹಾಗೆ ಭಾಷಣ ಮಾಡಬಾರದು; ಪ್ರಶ್ನೆಗಳಿದ್ದರೆ ಕೇಳಿ.

ಶ್ರೀ ಶಂಕರಗೌಡ ಪೈ. ಪಾಟೀಲ್.—ಸರ್ಕಾರ ದವರಿಗೆ ಈ ರಸ್ತೆಯ ಕೆಲಸವನ್ನೇನಾದರೂ ಈಗ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸ ಬೇಕೆಂಬ ಉದ್ದೇಶವಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ವಿಚಾರಗಳೆಲ್ಲ ಇನ್ನೂ ಇಕ್ವೆಸ್ಟಿಗೇಷನ್ ಸ್ಟೇಜಿನಲ್ಲಿವೆ.

Sri ANNA RAO GANAMUKHI.—May I know whether in view of the importance of the road it will be treated as a National Highway?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಅಲ್ಲಿ ಆ ಸೇತುವೆಗಳೇ ಆಗದಿರುವಾಗ .....

Sri ANNA RAO GANAMUKHI.—In view of the importance of the road, will the Government represent to the Central Government to treat this road as a National Highway?

Sri H. K. VEERANNA GOWDH.—The suggestion will be considered.

Sri P. G. SIDHANTHI.—May I know what is meant by Irish bridges?

Sri H. K. VEERANNA GOWDH.—It is not a big or a high bridge, but a low bridge to allow waters to pass.

Sri P. G. SIDHANTHI.—May I know whether it is a cause-way?

Sri H. K. VEERANNA GOWDH.—It is not a high level one.

ಶ್ರೀ ಜಿ. ಎಲ್. ಕಬಾಡಿ.—ಈ ವಿಚಾರ ಪರಿಶೀಲನೆ ಯಾ ಬೇಕಾದರೆ ಇನ್ನೂ ಎಷ್ಟು ದಿವಸಗಳು ಬೇಕು?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಪ್ರಶ್ನೆಗಾಗಲೇ ಉತ್ತರ ಹೇಳಿದ್ದೇನೆ.

Construction of a Bridge at Level Crossing No. 2 to the west of Gadag Station.

Q.—189. K. P. GADAG (Gadag).—Will the Government be pleased to state:—

(*a*) whether they are aware of the fact that the former Bombay Government had provided necessary amount in the Budget for the construction of a bridge at Level Crossing No. 2 to the west of Gadag Station;

(*b*) whether the Railway Board also had agreed to bear its share of the construction of the bridge;

(*c*) whether it is a fact that the work has not been taken up due to difference of opinion between the Railway authorities and Bombay Government, regarding the location of the bridge;

(*d*) the measures they have now taken for the construction of the said bridge?

A.—Sri H. K. VEERANNA GOWDH (Minister for Public Works).—

(*a*) Yes.

(*b*) Yes.

(*c*) and (*d*) There was some controversy regarding the site for and the type of bridge, but it has been decided finally to have an over bridge. This is a work to be undertaken by the Railways and it is ascertained that necessary provision would be made in the Railway budget for 1957-58.

Sri K. P. GADAG.—With reference to the answers to (*c*) & (*d*) may I know the amount that would be provided by the Railway Board in the Budget for 1957-58?

*ಶ್ರೀ ಎಚ್. ಕೆ. ವೀರಣ್ಣಗೌಡ.—ಬೊಂಬಾಯಿ ಸರ್ಕಾರದವರು 1957-58ನೆಯ ಸಾಲಿಗೆ ಬೇಕಾಗ ತಕ್ಕ ಹಣವನ್ನು ಒದಗಿಸುತ್ತೇವೆಂಬುದಾಗಿ ಅವರು ಅಷ್ಟು ಮಾತ್ರ ತಿಳಿಸಿದ್ದಾರೆ. ಅಷ್ಟನ್ನೇ ನಾವೂ ಸಹ ತಿಳಿಸಿದ್ದೇವೆ.

Sri K.P. GADAG.—May I know whether this amount would cover the construction of the bridge and the levelling of the road? May I know whether there is any intimation from the Railway Board regarding this matter

ಶ್ರೀ ಎಚ್. ಕೆ. ವೀರಣ್ಣಗೌಡ.—ಇದು ಸ್ಟೇಟ್ ಸರ್ಕಾರ ಮಾಡುವ ಕೆಲಸ.

ಶ್ರೀ ಜೆ. ಎಲ್. ಕಬಾಡಿ.—ರೈಲ್ವೆ ಬೋರ್ಡಿನವರು ಈ ಬಗ್ಗೆ ಎಷ್ಟು ದುಡ್ಡು ಕೊಟ್ಟಿದ್ದಾರೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ರೈಲ್ವೆ ಇಲಾಖೆ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಆ ವಿಚಾರ ದಲ್ಲಿ ನಮಗೇನೂ ತಿಳಿದು ಬಂದಿಲ್ಲ

ಶ್ರೀ ಸಿ ಎಸ್. ಹುಲ್ಕೋಟಿ.—ಈ ವರ್ಷಾದರೂ ಕೆಲಸವನ್ನು ಪ್ರಾರಂಭಿಸಲಾಗುವುದೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೇಂದ್ರ ಸರ್ಕಾರ ದವರು ಹಣ ಕೊಟ್ಟರೆ ಈ ವರ್ಷ ಕೆಲಸವನ್ನು ಕೈಗೊಳ್ಳ ಬಹುದು.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ವರ್ಷದ 57-58ರ ರೈಲ್ವೆ ಬಡ್ಜೆಟ್ಟಿನಲ್ಲಿ ಇದಕ್ಕೆ ಹಣವನ್ನೊದಗಿಸುವಂತೆ ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರ ಶಿಫಾರಸ್ಸು ಮಾಡಲು ಏನು ಅಡ್ಡಿ ಇದೆ?